5. ನಬಾರ್ಡ್ ಯೋಜನೆ
6. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ
7. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ

ಆ) ಪ್ರಸ್ತುತ 2014-15ನೇ ಸಾಲಿಗೆ ಒದಗಿಸಿದ ಯೋಜನಾವಾರು ಅನುದಾನ ವಿವರ ಕೆಳಕಂಡಂತಿದೆ.

(₹ ಕೋಟಿಗಳಲ್ಲಿ)

ಕ್ರ.ಸಂ.	ಯೋಜನೆ	ಒದಗಿಸಿದ ಅನುದಾನ
1	ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ-ಲೆಕ್ಕಶೀರ್ಷಿಕೆ-3054	153.55
2	13ನೇ ಹಣಕಾಸು ಆಯೋಗ ಯೋಜನೆ	134.70
3	ಯೋಜನೇತರ ಲೆಕ್ಕ ಶೀರ್ಷಿಕೆ-3054-ಜಿ.ಪಂ. ಕಾರ್ಯಕ್ರಮ ನಿರ್ವಹಣೆ	135.00
4	ನಬಾರ್ಡ್ ಯೋಜನೆ	133.16
5	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ	350.00
6	ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ-(ಲೆ.ಶೀ.3054)	870.84

ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಕಲಾವಿದರು

2627(1076); ಶ್ರೀ ಮೋಹಿಯುದ್ದೀನ್ ಬಾವಾ ಬಿ.ಎ.
(ಮಂಗಳೂರು ನಗರ ಉತ್ತರ)

ಅ) ಆರ್ಥಿಕ ಸಂಕಷ್ಟದಲ್ಲಿರುವ ಬಡ ಕಲಾವಿದರು ಮತ್ತು ಸಾಹಿತಿಗಳ ಹಿತಕ್ಕಾಗಿ ಸರ್ಕಾರ ಯಾವ ಯೋಜನೆಯನ್ನು ರೂಪಿಸಿದೆ;

ಆ) ಕಳೆದ 3 ವರ್ಷಗಳಲ್ಲಿ ಎಷ್ಟು ಕಲಾವಿದರು ಹಾಗೂ ಸಾಹಿತಿಗಳಿಗೆ ಮಾಸಾಶನ ನೀಡಲಾಗಿದೆ (ವಾರ್ಷಿಕವಾರು ವಿವರ ನೀಡುವುದು)?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಆರ್ಥಿಕ ಸಂಕಷ್ಟದಲ್ಲಿರುವ ಸಾಹಿತಿಗಳು/ಅಶಕ್ತ ಕಲಾವಿದರುಗಳಿಗೆ ಈ ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗಿದೆ.

* ಕಲಾವಿದರಿಗೆ ಮಾಸಾಶನ

* ಕಲಾವಿದರಿಗೆ ವೈದ್ಯಕೀಯ ವೆಚ್ಚದ ನೆರವು

* ಕಲಾವಿದರಿಗೆ ರೈಲ್ವೇ ರಿಯಾಯಿತಿ

* ಕಲಾವಿದರಿಗೆ ಗುರುತಿನ ಚೀಟಿ

* ಕಲಾವಿದರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಾಯೋಜನೆಯಲ್ಲಿ ವೇದಿಕೆ ಕಲ್ಪಿಸಿಕೊಟ್ಟು ಗೌರವ ಸಂಭಾವನೆ ನೀಡಲಾಗುತ್ತಿದ್ದು, ಆ ಮೂಲಕ ಕಲಾವಿದರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಪ್ರೋತ್ಸಾಹಿಸಲಾಗುತ್ತಿದೆ.

ಆ) * ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ:39ಕಗೌಧ:2009 ದಿನಾಂಕ:17.01.2011ರಂತೆ **1200** ಮಂದಿ ಸಾಹಿತಿ/ಕಲಾವಿದರಿಗೆ **ಮಾಸಾಶನ ನೀಡಲಾಗುತ್ತಿದೆ.**

* ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ:23ಕಗೌಧ:2012 ದಿನಾಂಕ:05.12.2012ರಂತೆ **1600** ಮಂದಿ ಸಾಹಿತಿ/ಕಲಾವಿದರಿಗೆ **ಮಾಸಾಶನ ನೀಡಲಾಗುತ್ತಿದೆ.**

* ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ:03ಕಗೌಧ:2013

ದಿನಾಂಕ:22.05.2014ರಂತೆ **1603** ಮಂದಿ ಸಾಹಿತಿ/ಕಲಾವಿದರಿಗೆ

ಮಾಸಾಶನ ನೀಡಲಾಗುತ್ತಿದೆ.

ಒಟ್ಟು 4403 ಕಲಾವಿದರಿಗೆ ಮಾಸಾಶನ ನೀಡಲಾಗುತ್ತಿದೆ.

ಆಸರೆ ಯೋಜನೆಯಡಿ ಮನೆಗಳ ನಿರ್ಮಾಣ

2629(1382); ಶ್ರೀ ನಾಗರಾಜ್ ಬಿ.ಎಂ. (ಸಿರಗುಪ್ಪ)

ಅ) 2009–10ನೇ ಸಾಲಿನಲ್ಲಿ ಬಿದ್ದ ಭಾರೀಮಳೆಯಿಂದ ಹಾನಿಗೊಳಗಾದ ಪ್ರದೇಶಗಳ ಗ್ರಾಮಗಳನ್ನು ಸ್ಥಳಾಂತರಿಸಿದ್ದು, ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮಗಳನ್ನು ಪೂರ್ಣ/ಭಾಗಶಃವಾಗಿ ಸ್ಥಳಾಂತರಿಸಲಾಗಿದೆ;

ಆ) ಮೇಲಿನ ಸ್ಥಳಾಂತರಿಸಿದ ಗ್ರಾಮಗಳಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಬೇಕಾಗಿತ್ತು; ಈಗಾಗಲೇ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ; ಬಾಕಿ ಇದ್ದಲ್ಲಿ ಕಾರಣವೇನು ಇನ್ನೂ ಎಷ್ಟು ತಿಂಗಳಲ್ಲಿ ಬಾಕಿ ಇರುವ ಮನೆಗಳನ್ನು ಪೂರ್ಣಗೊಳಿಸಲಾಗುವುದು (ಗ್ರಾಮವಾರು ಮಾಹಿತಿ ನೀಡುವುದು)

ಇ) ಈಗಾಗಲೇ ನಿರ್ಮಿಸಲಾಗಿರುವ ಮನೆಗಳನ್ನು ಅರ್ಹ ಸಂತ್ರಸ್ತರಿಗೆ ಹಸ್ತಾಂತರಿಸಲಾಗಿದೆಯೇ (ಗ್ರಾಮವಾರು ಮಾಹಿತಿ ನೀಡುವುದು)

ಈ) ಸ್ಥಳಾಂತರಿಸಿರುವ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆಯೇ; ಇದಕ್ಕಾಗಿ ಸರ್ಕಾರದಿಂದ ಎಷ್ಟು ಮೊತ್ತದಲ್ಲಿ ಯಾವ ಯಾವ ಯೋಜನೆಯಡಿ ಕಾಮಗಾರಿ ಕೈಗೊಳ್ಳಲಾಗಿದೆ (ಗ್ರಾಮವಾರು ಮಾಹಿತಿ ನೀಡುವುದು)

ಉ) ಮೂಲಭೂತ ಸೌಕರ್ಯ ಕಲ್ಪಿಸುವಂತಹ ಗ್ರಾಮಗಳು ಬಾಕಿ ಇದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುತ್ತದೆ?